ಯಾಗಿದೆ ಅಂತಹ ಕಡೆ ಸ್ವಲ್ಪ ಮಟ್ಟಿಗೆ ರಿಪೇರಿ ಮಾಡಲಿಕ್ಕೆ ಸಾಧ್ಯವಿದೆಯೇ ಹೊರತು ಅಲ್ಲಿರತಕ್ಕಂಥ ಎಲ್ಲ ರಸ್ತೆಗಳನ್ನು ನಾವು ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾಗಿ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ತಿಳಿಸುತ್ತೇನೆ. ಇವತ್ತು ಭದ್ರಾವತಿ ತಾಲ್ಲೂಕಿನಲ್ಲಿ ಸುಮಾರು ೧೨೩ ರಸ್ತೆಗಳಿದ್ದು, ಕಳೆದ ಸಾರಿ ಹನ್ನೆರಡೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ಆದರೆ ನಾವು ೧೫.೭೫ ಖರ್ಚು ಮಾಡಿದ್ದೇವೆ. ಎಲ್ಲೆಲ್ಲಿ ದುಸ್ಥಿತಿಯಲ್ಲಿದೆ ಅದನ್ನು ಸರಿಪಡಿಸತಕ್ಕಂಥ ಕೆಲಸ ನಡೆದಿದೆ. ಈಗ ಸಂಬಂಧಪಟ್ಟ ಚೀಫ್ ಇಂಜಿನಿಯರ್ ಕೂಡ ದುರಸ್ಥಿಯಾಗಬೇಕಾದಂಥ ಜಾಗಗಳನ್ನು ಗುರುತು ಮಾಡಿ ಅವುಗಳನ್ನು ಅಭಿವೃದ್ಧಿ ಪಡಿಸಲಿಕ್ಕೆ ಈಗಾಗಲೇ ಸೂಚನೆ ಕೂಡ ನಾವು ಕಳಿಸಿಕೊಟ್ಟಿದ್ದೇವೆ.

ಶ್ರೀ ಕರಿಯಣ್ಣ.— ಮಾನ್ಯ ಅಧ್ಯಕ್ಷರೆ, ಭದ್ರಾವತಿ ತಾಲ್ಲೂಕಿನಲ್ಲಿ ಸುಮಾರು ೩೦ ಎಕರೆ ಪ್ರದೇಶದಲ್ಲಿ ಕಬ್ಬು ಬೆಳೆಯುತ್ತಾರೆ. ಈ ಕಬ್ಬು ಬೆಳೆಯತಕ್ಕ ಪ್ರದೇಶದಲ್ಲಿ ಶುಗರ್‌ಕೇನ್ ಸೆಸ್ ಎಂದು ಹಿಂದೆ ಕಲೆಕ್ಟ್ ಮಾಡುತ್ತಾ ಇದ್ದರು. ಅದನ್ನು ನಿಲ್ಲಿಸಿ ಈಗ ಶುಗರ್ ಸೆಸ್ ಎಂದು ಬೇರೆ ಯಾವುದೋ ಕಲೆಕ್ಟ್ ಮಾಡುತ್ತಾ ಇದ್ದಾರೆ. ಅದನ್ನು ಕೂಡ ರಸ್ತೆ ರಿಪೇರಿಗೆ ಕೊಡದೇ ಹೋದರೆ ರಸ್ತೆಗಳ ಅಭಿವೃದ್ಧಿಯಾಗುವುದಿಲ್ಲ. ಅಲ್ಲಿನ ಉತ್ಪತ್ತಿಯಿಂದ ರಸ್ತೆಗಳ ಅಭಿವೃದ್ಧಿ ಮಾಡುತ್ತಾ ಇಲ್ಲ. ನಾನು ಯಾವ ಸಾಲಿನಲ್ಲಿ ೪ ಸಾವಿರ ರೂಪಾಯಿ ಎಂದು ನಿಗದಿ ಮಾಡಿದ್ದೀರಿ ಎಂದು ಕೇಳಿದೆ. ಈಗಾಗಲೇ ಕೂಲಿ ರೇಟ್, ಮಿನರಲ್ ರೇಟ್ ಹೆಚ್ಚಾಗಿರುವುದರಿಂದ ೧೦ ವರ್ಷಗಳ ಹಿಂದೆ ನಿಗದಿ ಮಾಡಿರುವಂಥಾದ್ದನ್ನು ಈ ವರ್ಷವೂ ಕೊಟ್ಟರೆ ಆಗುವುದಿಲ್ಲ. ಅಲ್ಲೆಲ್ಲಾ ರಸ್ತೆ ಹಾಳಾಗಿದೆ. ಆದುದರಿಂದ ಇದಕ್ಕೆ ಏನಾದರೂ ವಿಶೇಷವಾಗಿ ಶುಗರ್‌ಕೇಸ್‌ನಿಂದ ಬರತಕ್ಕಂಥ ಹಣದಿಂದ ಕೊಡುತ್ತೀರ ಎಂದು ನಾನು ತಮ್ಮನ್ನು ಕೇಳಬಯಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಈ ಒಂದು ಬೇಡಿಕೆ ರಾಜ್ಯದ ಅನೇಕ ಭಾಗಗಳಿಂದ ಬರುತ್ತಿದೆ. ಶುಗರ್‌ಫ್ಯಾಕ್ಟರಿ ಏರಿಯಾದಲ್ಲಿರತಕ್ಕಂಥಾವರು ನಮ್ಮಿಂದ ಪರ್ಚೇಸ್ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಿದ್ದೀರಿ, ಆ ರಸ್ತೆಗಳನ್ನು ಆ ಹಣದಿಂದ ಸುವ್ಯವಸ್ಥೆಯಲ್ಲಿ ಇಡತಕ್ಕಂಥ ಪ್ರಯತ್ನ ಮಾಡಬೇಕು ಎನ್ನತಕ್ಕಂಥ ಒತ್ತಾಯ ಬರುತ್ತಾ ಇದೆ. ಈ ಕಡೆ ಗಮನ ಹರಿಸತಕ್ಕಂಥಾದ್ದು ಅಗತ್ಯ ಎನ್ನುವುದನ್ನು ಸರ್ಕಾರ ಈಗಾಗಲೇ ತೀರ್ಮಾನ ತೆಗೆದುಕೊಂಡಿದೆ. ಈ ದಿಶೆಯಲ್ಲಿ ಶೀಘ್ರದಲ್ಲಿ ಒಂದು ತೀರ್ಮಾನ ತೆಗೆದುಕೊಂಡು ಆ ಶುಗರ್ ಫ್ಯಾಕ್ಟರಿ ಏರಿಯಾದಲ್ಲಿ ಬರತಕ್ಕಂಥ ರಸ್ತೆಗಳನ್ನು ಆ ಹಣದಲ್ಲಿ ರಿಪೇರಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು.— ಈಗ ೩೨೦ನೇ ಪ್ರಶ್ನೆಯನ್ನು ವಿರೋಧ ಪಕ್ಷದ ನಾಯಕರ ಪರವಾಗಿ ಶ್ರೀ ಸಿಂಧ್ಯ ಅವರು ಕೇಳಬಹುದು.

ಕೃಷ್ಣಾ ಮೇಲ್ದಂಡೆ ಯೋಜನೆ

೧೬೨. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಪಲ್ಲಿ),— ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಕಾರ್ಯ ಯಾವ ಹಂತದಲ್ಲಿದೆ?

ಆ) ಸದರೀ ಯೋಜನೆಯನ್ನು ಈ ಹಿಂದೆಯೇ ಪೂರೈಸುವ ಭರವಸೆಯನ್ನು ನೀಡಲಾಗಿತ್ತಲ್ಲವೇ?

ಇ) ಪೂರೈಸದೇ ಇರುವುದಕ್ಕೆ ಕಾರಣಗಳೇನು?

ಈ) ಈ ವಿಳಂಬಕ್ಕೆ ನಿರ್ದಿಷ್ಟ ಕಾರಣವೇ, ಹಾಗಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಉ) ಆಗಿಲ್ಲದಿದ್ದರೆ ಕಾರಣಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು).—

ಅ) ಬಸವಸಾಗರ (ನಾರಾಯಣಪುರ) ಅಣೆಕಟ್ಟು ಪೂರ್ಣಗೊಂಡಿದ್ದು ಆಲಮಟ್ಟಿ ಅಣೆಕಟ್ಟಿನ ಸ್ಪಿಲವೇಯನ್ನು ೫೦೦ ಮೀಟರ್ ಮಟ್ಟಿದಪರೆಗೆ ಕಟ್ಟಲಾಗಿದೆ. ಅಣೆಕಟ್ಟನ್ನು ಏರಿಸುವ ಬಗ್ಗೆ ಸಿದ್ಧತೆಗಳು ನಡೆದಿವೆ. ನಾರಾಯಣಪುರ ಎಡದಂಡೆ ಕಾಲುವೆ ಕೆಲಸ ಪೂರ್ಣಗೊಂಡಿದ್ದು, ಶಹಾಪುರ ಉಪ ಕಾಲುವೆಯ ಕಾಮಗಾರಿಗಳು ಅದರ ಮೊದಲ ೯ ವಿತರಣಾ ನಾಲೆಗಳ ಸಹಿತ, ಬಹುತೇಕ ಪೂರ್ಣಗೊಂಡಿದೆ. ಮುಂದಿನ ವಿತರಣಾ ನಾಲೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಮುಂದ್ಯಾಳ

ಹಾಗೂ ಇಂಡಿ ಉಪ ಕಾಲುವೆಗಳ ಕಾಮಗಾರಿಗಳು ಆರಂಭಗೊಂಡಿವೆ. ಮಾರ್ಚ್ ೧೯೯೦ರ ಕೊನೆಯ ವರೆಗೆ ಈ ಯೋಜನೆಯಡಿಯಲ್ಲಿ ೧೦೯೩೮೫ ಹೆಕ್ಟೇರು ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದ್ದು, ೫೬೪.೬೬ ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.

ಆ) ೧೯೮೫ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದ ಮೊದಲನೆಯ ಘಟ್ಟದ ಯೋಜನಾ ವರದಿಯ ಪ್ರಕಾರ ಯೋಜನೆಯನ್ನು ೧೯೯೫-೯೬ರ ವೇಳೆಗೆ ಪೂರೈಸಬೇಕಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಯೋಜನೆಯು ಪೂರ್ಣಗೊಳ್ಳಲು ಆಗುತ್ತಿರುವ ವಿಳಂಬಕ್ಕೆ ಮುಖ್ಯ ಕಾರಣಗಳು (೧) ಹಣದ ಕೊರತೆ (೨) ಭೂ ಸ್ವಾಧೀನದಲ್ಲಿ ವಿಳಂಬ (೩) ಸಿಬ್ಬಂದಿ ವರ್ಗದ ಕೊರತೆ (೪) ವಿನ್ಯಾಸದಲ್ಲಿ ಆದ ಬದಲಾವಣೆಗಳು (೫) ಪಂಚಾಯ್ತಿ ಹಾಗೂ ಕೋರ್ಟ್ ಪ್ರಕರಣಗಳು, ಇತ್ಯಾದಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಸನ್ಮಾನ್ಯ ಅಧ್ಯಕ್ಷರೆ, ಈ ಕೃಷ್ಣ ಮೇಲ್ದಂಡೆ ಯೋಜನೆ ಏನಿದೆ ಇದು ನಮ್ಮ ರಾಜ್ಯದ ಸುಮಾರು ೪-೫ ಜಿಲ್ಲೆಗಳ ರೈತರ ಭವಿಷ್ಯವನ್ನು ನಿರ್ಧಾರ ಮಾಡತಕ್ಕಂಥ ಒಂದು ದೊಡ್ಡ ನೀರಾವರಿ ಯೋಜನೆ. ಮತ್ತೆ ಬಚಾವತ್ ಅವಾರ್ಡ್ ಹಿನ್ನೆಲೆಯಲ್ಲಿ ಈ ಕೃಷ್ಣಮೇಲ್ದಂಡೆ ಯೋಜನೆಯು ಕಾಮಗಾರಿಗಳನ್ನು ಬೇಗ ಮುಗಿಸತಕ್ಕಂಥಾದ್ದು ಬಹಳ ಒಂದು ಮಹತ್ವದ ಕೆಲಸ ವಾಗಿದೆ. ಇಂತಹ ಒಂದು ಸಂದರ್ಭದಲ್ಲಿ ಮಾನ್ಯ ಸಚಿವರು ಉತ್ತರ ಕೊಡುತ್ತಾ

"The broad reasons for the delay in completion of the project are:

i) paucity of funds, (ii delay in land acquisition, (iii) shortage of staff, (iv) changes in the designs, (v) Arbitration and court cases etc."

ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನಾದರೂ ಮಾನ್ಯ ಸಚಿವರಲ್ಲಿ ಕೇಳುವುದು ಏನೆಂದರೆ, ತಾವು ನೀರಾವರಿ ಸಚಿವರಾದಮೇಲೆ ಈ ಕೃಷ್ಣ ಮೇಲ್ದಂಡೆ ಯೋಜನೆಯನ್ನು ಇನ್ಸ್‌ಪೆಕ್ಷನ್ ಮಾಡಿದ್ದೀರಾ ? ರಿವ್ಯೂ ಮಾಡಿದ್ದೀರಾ ? ಏಕೆಂದರೆ ಅಲ್ಲಿ ಅನೇಕ ಜನ ಕಂಟ್ರಾಕ್ಟರುದಾರರಿಗೆಗಳು ಹೊರ ರಾಜ್ಯಗಳಿಂದ ಬಂದು ಅನ್ಯಾವಶ್ಯಕವಾಗಿ ಅವ್ಯವಹಾರಗಳನ್ನು ನಡೆಸಿರತಕ್ಕಂಥಾದ್ದು ತಮ್ಮ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ರಿವ್ಯೂ ಮಾಡಿದ್ದೀರಾ ? ಇನ್ಸ್‌ಪೆಕ್ಷನ್ ಮಾಡಿದ್ದೀರಾ ಎನ್ನುವುದು ಒಂದು. ಮತ್ತೆ ಇದಕ್ಕೊಸ್ಕರವೇ ಎಂದು ಒಬ್ಬ ಚೀಫ್ ಇಂಜನಿಯರ್ ಜನರಲ್‌ರನ್ನು ಮಾಡಿ ಹೆಡ್ ಕ್ವಾರ್ಟರ್ಸ್‌ನಲ್ಲೇ ಇರಬೇಕು. ಒಬ್ಬರು ಚೀಫ್ ಇಂಜನಿಯರ್ ಸಾಲುವುದಿಲ್ಲ ಎಂದು ಮೂರು ಜನ ಚೀಫ್ ಇಂಜನಿಯರುಗಳನ್ನು ಸಹಿತ ನಾವು ನೇಮಕ ಮಾಡಿದ್ದೇವೆ. ಹಾಗಾದರೆ ಕಳೆದ ೨-೩ ವರ್ಷ ಗಳಲ್ಲಿ ಅವರು ಏನು ಕೆಲಸ ಮಾಡಿದ್ದಾರೆ. ಏಕೆ ಹಿಂಗಾಯಿತು ? ಹಿಂದೆ ನಾನು ಸ್ವಲ್ಪ ದಿವಸ ನೀರಾವರಿ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಇದೇ ಉತ್ತರ ಬರುತ್ತಾ ಇದೆ. "Preparation are in progress on raising the dam". Works of further distributaries have been started". ಸ್ಟಾರ್ಟೆಡ್ ಮತ್ತೆ ಕನ್ನಿಡರೇಷನ್ ಎಂದು ಉತ್ತರವನ್ನು ಬರೆದು ಕೊಳ್ಳುವುದು, ನಾವು ಇದನ್ನು ಹೇಳುವುದೇ ಆಗಿಹೋಗಿದೆ. ಏಕೆಂದರೆ ಇದು ಇಡೀ ರಾಜ್ಯದ ಭವಿಷ್ಯದ ಪ್ರಶ್ನೆಯಾಗಿರುವುದರಿಂದ ನಾನಾದರೂ ಮಾನ್ಯ ಮಂತ್ರಿಗಳನ್ನು ಕೇಳಲಿಕ್ಕೆ ಬಯಸತಕ್ಕಂಥಾದ್ದು ಏನೆಂದರೆ, ಇದರ ಬಗ್ಗೆ ಒಂದು ಎನ್‌ಕ್ವೈರಿ ಮಾಡತಕ್ಕದ್ದೇ ಒಳ್ಳೆಯದು. ಆಗ ಎಲ್ಲೆಲ್ಲಿ ಏನೇನಾಗಿದೆ. ಏನು ಕಾರಣ, ರಾಜಕಾರಣಿಗಳ ಕೈವಾಡ ಏನಾದರೂ ಇದೆಯೋ ಅಥವಾ ಇಂಜನಿಯರುಗಳ ಕೈವಾಡ ಇದೆಯೋ ಅಥವಾ ಪೀಸ್ ವರ್ಕ್ ಹೆಸರಿನಲ್ಲಿ ಏನಾದರೂ ಅವ್ಯವಹಾರ ನಡೆದಿದೆಯೊ ಇದೆಲ್ಲವನ್ನು ಸಮಗ್ರವಾಗಿ ತಿಳಿದುಕೊಳ್ಳಲಿಕ್ಕೆ ನಮಗೂ ಸಹಿತ ಅನುಕೂಲವಾಗುತ್ತದೆ. ಮತ್ತು ನಾವು ಇವತ್ತು ಕಾವೇರಿ ನೀರಿನ ಸಮಸ್ಯೆಗೆ ಏನು ತಗಲುಹಾಕಿಕೊಂಡಿದ್ದೇವೆ, ಆದೇರೀತಿ ನೀವು ತಗಲುಹಾಕಿಕೊಳ್ಳದೆ ಇರಬೇಕಾದರೆ ಎರಡು ಸಾವಿರ ಇಸವಿಯೊಳಗೆ ಇದನ್ನು ಮುಗಿಸಲೂ ಸಹಿತ ಅನುಕೂಲವಾಗುತ್ತದೆ. ಆದುದರಿಂದ ಇವೆರಡು ಪ್ರಶ್ನೆಗಳ ಬಗ್ಗೆ ತಾವು ಗಮನ ಕೊಡಬೇಕು ಎಂದು ನಾನು ಆಗ್ರಹ ಮಾಡುತ್ತೇನೆ.

(ಮುಂದಲ)

ಶ್ರೀ ಜಿ. ಪುಟ್ಟಸ್ವಾಮಿ ಗೌಡ.— ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ಉಪ ನಾಯಕರು ಹೇಳಿದಂತೆ, ಕೃಷ್ಣ ಮೇಲ್ದಂಡೆ ಯೋಜನೆಯನ್ನು ೨೦೦೮ರೊಳಗೆ ಮುಗಿಸಿ ನೀರನ್ನು ಉಪಯೋಗಿಸಿ ಕೊಳ್ಳದೇ ಹೋದರೆ ರಾಜ್ಯಕ್ಕೆ ಅಪಾರವಾದಂಥ ನಷ್ಟವಾಗುತ್ತದೆ. ಇದು ನಿಜ. ಈ ಹಿನ್ನೆಲೆಯಲ್ಲಿ ಈ ಯೋಜನೆಯ/ಕಾರ್ಯಗಳು ನಿರೀಕ್ಷಿಸಿದ ಮಟ್ಟದಲ್ಲಿ ಒಂದಲ್ಲ ಒಂದು ಕಾರಣದಿಂದ ವೇಗವಾಗಿ ಮಾಡಲಾಗುವುದಕ್ಕಾಗಿಲ್ಲ ಎಂಬುದನ್ನು ವರದಿಯ ಸಮೀಕ್ಷೆಯಿಂದಲೇ ತಿಳಿದುಕೊಳ್ಳಬಹುದು. ಆದರೂ ಒಂದು ಮಾತು ನಿಜ. ಈ ಯೋಜನೆಯ ಅನುಷ್ಠಾನದಲ್ಲಿ ಹಲವಾರು ತೊಡಕುಗಳು ಇದ್ದವು. ಈಗ ಆ ತೊಡಕುಗಳನ್ನೆಲ್ಲಾ ನಿವಾರಣೆ ಮಾಡಿದ್ದೇವೆ ಜಾಗತಿಕ ಬ್ಯಾಂಕ್‌ನಿಂದ ನೆರವನ್ನು ತೆಗೆದುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದೇವೆ. ಇದಕ್ಕಾಗಿ ಮಾನ್ಯ ಸದಸ್ಯರು ಸಂತೋಷ ಪಡಬೇಕು. ಆಲಮಟ್ಟಿ ಯೋಜನೆಯ ವಿತ್ತೀಯವನ್ನು ಏರಿಸತಕ್ಕ ದಿಕ್ಕಿನಲ್ಲಿ ಗ್ಲೋಬಲ್ ಟೆಂಡರ್ ಕರೆದಿದ್ದೇವೆ. ಪ್ರಪಂಚದ ಎಂಬೆಸಿಗಳಿಗೆಲ್ಲಾ ನೋಟಿಫಿಕೇಷನ್ ಹಾಕಿದ್ದೇವೆ. ಮತ್ತು ಷೆಡ್ಯೂಲ್ ಪ್ರಕಾರ ಈ ಟೆಂಡರ್‌ನ್ನು ಫೈನಲೈಸ್ ಮಾಡುವುದಕ್ಕೆ ನಮ್ಮ ಯಾವುದೇ ಕೈವಾಡ ಇಲ್ಲ. ಜಾಗತಿಕ ಬ್ಯಾಂಕ್‌ನವರು ತಮ್ಮದೇ ಆದ ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಅದನ್ನು ನಾವು ಒಪ್ಪಿದ್ದೇವೆ, ಇದನ್ನು ಒಪ್ಪುವುದರಿಂದ ಯಾವುದೇ ತೊಡಕುಗಳೂ ಇಲ್ಲದೇ ಸುವ್ಯವಸ್ಥಿತವಾಗಿ ನಮ್ಮ ಕೆಲಸ ನಡೆಯುತ್ತಿದೆಯೆ ಅವರ ಗೈಡ್‌ಲೈನ್ಸ್ ಪ್ರಕಾರ ಕೆಲಸ ಮಾಡುತ್ತೇವೆ. ನವೆಂಬರ್ ತಿಂಗಳಲ್ಲಿ ಕಾರ್ಯ ಆರಂಭವಾಗುತ್ತದೆ. ನಾರಾಯಣಪುರ ಡ್ಯಾಂ ಕೆಲಸ ಮುಗಿದೆ ಒಂದುಲಕ್ಷ ಹತ್ತು ಸಾವಿರ ಸಹಸ್ರ ಹೆಕ್ಟೇರ್‌ಗಳಿಗೆ ನೀರು ಒದಗಿಸತಕ್ಕ ಕಾರ್ಯ ಆಗಿದೆ. ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳಲ್ಲಿ ನಾಲೆಗಳನ್ನು ತೋಡತಕ್ಕ ಕೆಲಸ ಆರಂಭವಾಗಿದೆ ಅಲ್ಲಿ ವಿಶೇಷವಾದಂಥ ರೀತಿಯಲ್ಲಿ ಟೆಂಡರ್‌ಅನ್ನು ಫೈನಲೈಸ್ ಮಾಡಿದ್ದೇವೆ. ಮೈಯಿನ್ ಕ್ಯಾನಲ್‌ನಿಂದ ಫೀಡ್ ಕ್ಯಾನಲ್ ವರೆಗೆ ಒಬ್ಬನೇ ಕಂಟ್ರಾಕ್ಟ್‌ದಾರರಿಗೆ ಕೆಲಸ ವಹಿಸಲಾಗಿದೆ. ಆ ಕೆಲಸದ ಟೆಕ್ನಿಕಲ್‌ನೋ ಜಿ ಮತ್ತು ಗುಣ ಮಟ್ಟ ಹೀಗೆ ಎಲ್ಲವನ್ನು ಸಂಬಂಧ ಪಟ್ಟ ಕಂಟ್ರಾಕ್ಟರ್ ನಿರ್ವಹಿಸಬೇಕು. ನಮ್ಮ ಅಧಿಕಾರಿಗಳು ಕ್ರಮವಾಗಿ ಉಸ್ತುವಾರಿ ನೋಡಿಕೊಳ್ಳುತ್ತಾರೆ. ದರಿಂದ ಕಳಪೆ ಕೆಲಸ ಮಾಡುವುದ ಕ್ಕಾಗುವುದಿಲ್ಲ ಮತ್ತು ಯಾರೂಸಹ ಹಸ್ತಕ್ಷೇಪ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ಇದರ ಷೆಡ್ಯೂಲ್ ಪ್ರಕಾರ ೯೫-೯೬ನೇ ಇಸವಿಗೆ ಈ ಒಂದು ಯೋಜನೆಯ ಕೆಲಸ ಮುಗಿಯುತ್ತದೆ ಎನ್ನುವ ಆಶಯ ನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಕೊಡಬಯಸುತ್ತೇನೆ. ೨೦೦೦ ಇಸವಿಯೊಳಗೆ ಈ ನೀರನ್ನು ಉಪಯೋಗಿಸಿಕೊಳ್ಳುವುದರಲ್ಲಿ ಜವಾಬ್ದಾರಿಯುತವಾದ ಕೆಲಸವನ್ನು ನಮ್ಮ ಸರ್ಕಾರ ಮಾಡುವುದರಲ್ಲಿ ಹಿಂದೆ ಬೀಳುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ — ನಾನು ಮಾನ್ಯ ಮಂತ್ರಿಗಳನ್ನು ಕೇಳಬಯಸಿದ ಪ್ರಶ್ನೆಯೇ ಬೇರೆ. ಈಗ ಜಾಗತಿಕ ಬ್ಯಾಂಕ್‌ನ ಗೈಡ್‌ಲೈನ್ಸ್ ಪ್ರಕಾರವೇ ಗ್ಲೋಬಲ್ ಟೆಂಡರ್ ಕರೆದಿದ್ದೇವೆ, ಇದರಿಂದ ಯಾವುದೇ ರೀತಿಯ ಕೈವಾಡ ನಡೆಸುವುದಕ್ಕೆ ಆಗುವುದಿಲ್ಲ. ಜಾಗತಿಕ ಬ್ಯಾಂಕ್‌ನ ಗೈಡ್‌ಲೈನ್ಸ್ ಫಾಲೋ ಮಾಡಬೇಕಾಗುತ್ತದೆ ಎಂಬುದು ಒಪ್ಪಬೇಕಾದ ವಿಚಾರವೇ ಆಗಿದೆ. ನವೆಂಬರ್ ತಿಂಗಳಲ್ಲಿ ಕೆಲಸ ಪ್ರಾರಂಭಿಸುತ್ತೇವೆಂದು ಹೇಳಿದ್ದೀರಿ, ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ನಿಂತು ಹೋಗಿರುವ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಸಂತೋಷ. ತಾವು ಈ ಇಲಾಖೆ ವಹಿಸಿಕೊಂಡಮೇಲೆ ರಿವ್ಯೂ ಮಾಡಿದ್ದೀರಾ ? ತಾವು ಇನ್‌ಸ್ಪೆಕ್ಷನ್ ಮಾಡಿದ್ದೀರಾ ? ಟೈಲೆಂಡ್‌ವರೆಗೆ ಹೋಗಿದ್ದೀರಾ ? ಅಲ್ಲಿರತಕ್ಕಂಥ ವಿಚಾರಗಳನ್ನೆಲ್ಲಾ ತಾವು ತಿಳಿದುಕೊಂಡಿದ್ದೀರಾ ? ಎರಡನೆಯದಾಗಿ ತಮ್ಮ ಹಿರಿಯ ಅಧಿಕಾರಿಗಳು ರಿಟರ್ನ್ ಆನ್ಸರ್ಸ್ ಕೊಟ್ಟಿದ್ದಾರೆ. ಚೀಫ್ ಇಂಜಿನಿಯರ್ ಜನರಲ್ ಇದಾರೆ, ಅವರೇನು ಮಾಡುತ್ತಿದ್ದಾರೆ ? ಡಿಸೈನ್ಸ್ ಮಾಡುವುದಕ್ಕೆ ಇಷ್ಟು ತಿಂಗಳು ಆದರೆ ಹೇಗೆ. ಇದರಲ್ಲಿ ಹೊಸ ಪ್ರಾಬ್ಲಮ್ಸ್ ಏನು ಬಂದಿಲ್ಲ. ಆದರೂ ನಿರ್ಧಾರವಾಗಲು ಕಾರಣವೇನು ? ಹಿಂದೆ ನಡೆದಿರತಕ್ಕ ದುರ್ವ್ಯವಹಾರಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳಿದ್ದು, ಇದಕ್ಕೆಲ್ಲಾ ಯಾರು ಹೊಣೆ ? ರಾಜಕಾರಣಿಗಳೇ ಇದಕ್ಕೆ ಕಾರಣಕರ್ತರಾಗಿದ್ದರೆ, ಅವರಿಗೂ ಶಿಕ್ಷೆ ಆಗಲಿ ಇದರ ಬಗ್ಗೆ ನಾನು ಕೇಳಿದ್ದು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ — ನಾನು ಸ್ಥಳಕ್ಕೆ ಹೋಗಿದ್ದೇನೆ. ಆ ಪ್ರಾಜೆಕ್ಟ್‌ನಲ್ಲಿ ೬ ದಿವಸ ಇದ್ದು, ಟೈಲೆಂಡ್‌ವರೆಗೂ ಹೋಗಿ ಸ್ಥಳ ಪರಿಶೀಲನೆ ಮಾಡಿ, ಸ್ಥಳದಲ್ಲಿಯೇ ಹಲವಾರು ನ್ಯೂನ್ಯತೆ ಗಳನ್ನು ಸರಿಪಡಿಸುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಒಂದು ಕಡೆಯಲ್ಲಂತೂ ೪-೬ ಕಡೆ ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿದ್ದೇನೆ. ಲ್ಯಾಂಡ್ ಅಕ್ವಿಜಿಷನ್ ಬಗ್ಗೆ ಟೆಂಡರ್ ಫೈನಲೈಸ್ ಮಾಡುವ ಬಗ್ಗೆ ಹಾಗೂ ಇನ್ನಿತರ ಡಿಸೈನ್‌ಗಳಬಗ್ಗೆ ನಾನೂ ಅವರ ಜೊತೆ ಚರ್ಚೆ ಮಾಡಿದ್ದೇನೆ.

೧೧–೩೦ ಎ.ಎಂ.

ಮುಖ್ಯವಾಗಿ ಅಲ್ಲಿರುವ ಸಮಸ್ಯೆಗಳನ್ನೆಲ್ಲಾ ಬಿಡಿಸತಕ್ಕಂಥ ಕೆಲಸವನ್ನು ನಾವು ಮಾಡಿದ್ದೇವೆ. ಮಾನ್ಯ ಸದಸ್ಯರು ಅಲ್ಲಿ ಹಲವಾರು ಅವ್ಯವಹಾರಗಳು ಏನು ನಡೆದಿವೆ, ಅವುಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ ಎಂದು ಕೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅವ್ಯವಹಾರಗಳು ಸಾಕಷ್ಟು ಆಗಿದೆ. ಪೀಸ್ ವರ್ಕ್ ಕೊಡತಕ್ಕ ಪ್ರಯತ್ನದಲ್ಲಿಯೂ ಹಲವಾರು ರೀತಿಯ ಅವ್ಯವಹಾರಗಳು ಆಗಿರುವುದು ನಿಜ. ಹಾಗೆಯೇ ಕ್ಲಾಸಿಫಿಕೇಷನ್ ಕೊಡುವುದರಲ್ಲಿಯೂ ಕೂಡ ಅವ್ಯವಹಾರ ಆಗಿದೆ. ಇವುಗಳ ಬಗ್ಗೆ ತನಿಖೆ ಮಾಡಿಸುವುದರ ಬಗ್ಗೆ ಕೆಲವೊಂದನ್ನು ಲೋಕಾಯುಕ್ತಕ್ಕೆ ಹಾಕಿದ್ದೇವೆ. ಮತ್ತೆ ಕೆಲವೊಂದನ್ನು ನಮ್ಮ ಇಲಾಖೆಯಲ್ಲಿಯೇ ಪ್ರೈಮಾಫೇಸಿ ಇದಯೋ ಇಲ್ಲವೋ ಎಂದು ತನಿಖೆ ಮಾಡಿಸುತ್ತಿದ್ದೇನೆ. ಇದರ ಬಗ್ಗೆ ಅಂಕಿಅಂಶಗಳನ್ನು ನಂತರ ತಮಗೆ ತಲುಪಿಸಲಿಕ್ಕೆ ಸಿದ್ಧನಿದ್ದೇನೆ. ಮಾನ್ಯ ಸದಸ್ಯರು ಕೇಳಿದಂತೆ ಎಷ್ಟು ಪ್ರಕರಣಗಳಲ್ಲಿ ತನಿಖೆ ಮಾಡಿದ್ದೇವೆಂದು ಇವೊತ್ತು ಹೇಳುವುದು ಕಷ್ಟವಾಗುತ್ತದೆ.

ಡಾ ಎಲ್. ಮಲಕರೆಡ್ಡಿ.— ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ೧೯೮೫ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದ ಮೊದಲನೆಯ ಘಟ್ಟದ ಯೋಜನಾ ವರದಿಯ ಪ್ರಕಾರ ಯೋಜನೆಯನ್ನು ೧೯೯೫–೯೬ರ ವೇಳೆಗೆ ಪೂರೈಸಬೇಕಾಗಿದೆ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಇದನ್ನು ತಾವು ಪೂರ್ತಿ ಮಾಡಲಿಕ್ಕೆ ಎಷ್ಟು ಹಣವನ್ನು ಒದಗಿಸಿದ್ದೀರಿ. ಮತ್ತು ಎಸ್ಟಿಮೇಟ್ ಎಷ್ಟಕ್ಕೆ ಆಗಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಇದು ಜಾಗತಿಕ ಬ್ಯಾಂಕ್ ನೆರವು ಕೊಡತಕ್ಕಂಥ ಯೋಜನೆ. ಈ ಯೋಜನೆಗೆ ಹಣದ ಪ್ರಶ್ನೆ ಬರುವುದಿಲ್ಲ. ಈಗ ನೂರಕ್ಕೆ ಎಂಭತ್ತರಷ್ಟು ಹಣವನ್ನು ಜಾಗತಿಕ ಬ್ಯಾಂಕ್‌ನವರು ಕೊಡುವುದರಿಂದ, ಹಣದ ಕೊರತೆ ಈ ಒಂದು ಯೋಜನೆಗೆ ಬರುವುದಿಲ್ಲ. ನಮ್ಮ ಭಾಗದ ಷೇರು ೧೫ರಿಂದ ೨೦ ಪರ್‌ಸೆಂಟ್. ನಮಗೆ ಆ ಹಣವನ್ನು ಒದಗಿಸುವುದು ಕಷ್ಟವಾಗುವುದಿಲ್ಲ. ನಮ್ಮ ನೀರಿನ ಹಕ್ಕನ್ನು ಉಪಯೋಗಿಸಿಕೊಳ್ಳಲಿಕೆ ಹಿಂದೆ ಬೀಳುವುದಿಲ್ಲವೆಂಬ ಮಾತನ್ನು ಖಂಡಿತವಾಗಿ ಹೇಳುತ್ತೇನೆ.

ಪ್ರಶ್ನೆ ೧೬೩ (೩೪೩) ಸದಸ್ಯರು ಗೈರುಹಾಜರು.

ಹಳೆಯ ಸೇತುವೆಗಳಲ್ಲಿನ ನಿರುಪಯುಕ್ತ ವಸ್ತುಗಳ ಹರಾಜು

೪೭೪ ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).— ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿಯ ರಸ್ತೆಗಳನ್ನು ಅಗಲ ಮತ್ತು ನೆಟ್ಟಗೆ (ಸ್ಟೈಟ್) ಮಾಡುವಾಗ ಹಲವಾರು ಸೇತುವೆಗಳು ನಿರುಪಯುಕ್ತವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಅಂತಹ ಸೇತುವೆಗಳಲ್ಲಿ ಹಲವಾರು ಉಪಯುಕ್ತ ಸಾಮಾಗ್ರಿಗಳಿರುವುದರಿಂದ ಅವುಗಳನ್ನು ಏಲಂ ಮಾಡುವುದರಿಂದ ಸರ್ಕಾರಕ್ಕೆ ಆದಾಯ ಬರುವುದಿಲ್ಲವೇ?

ಇ) ಹಾಗಿದ್ದಲ್ಲಿ ಏಲಂ ಮಾಡಲು ಸರ್ಕಾರವು ಸೂಕ್ತ ಕ್ರಮ ತೆಗೆದುಕೊಳ್ಳುವುದೆ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ಬಂದಿದೆ.

ಆ) ಉಪಯುಕ್ತ ಸಾಮಾಗ್ರಿಗಳು ಇರುವಂತಹ ನಿರುಪಯುಕ್ತ ಸೇತುವೆಗಳನ್ನು ಹರಾಜು ಮಾಡಿ ಬಂದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲಾಗುತ್ತಿದೆ.

ಇ) ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎ ರುಕ್ಮಯ್ಯ ಪೂಜಾರಿ.— ಮಾನ್ಯ ಅಧ್ಯಕ್ಷರೆ ನಮ್ಮ ರಾಜ್ಯದಲ್ಲಿ ಈ ರಸ್ತೆಗಳನ್ನು ಅಗಲ ಮಾಡುವ ಮತ್ತು ನೆಟ್ಟಗೆ ಮಾಡುವ ಸಂದರ್ಭದಲ್ಲಿ ಹಲವಾರು ಸೇತುವೆಗಳು ನಿರುಪಯುಕ್ತವಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಅದರಲ್ಲಿರುತಕ್ಕ ಸಾಮಾನುಗಳು ಏನಿದೆ, ಕಲ್ಲುಗಳು ಮತ್ತು ಐರನ್ ತುಂಬಾ ಬೆಲೆ ಬಾಳತಕ್ಕದ್ದು ಇರುತ್ತದೆ. ಅದನ್ನು ಹರಾಜು ಮಾಡಿ ಅದರಿಂದ ಬಂದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿದರೆ ಸರ್ಕಾರಕ್ಕೆ ತುಂಬಾ ಆದಾಯ ಬರುತ್ತದೆ. ಮಾನ್ಯ